# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 164/2015 ಸಿಡಬ್ಲೂ: 2 ಪಿಡಬ್ಲೂ: 4

ಪ್ರಮಾಣವಚನ ಬೋಧಿಸಲಾಯಿತು ದಿಃ 17-06-2025

ಹೆಸರು : ಸುರೇಶ್

ತಂದೆ ಹೆಸರು : ಬಸಣ್ಣ

ವಯಸ್ಸು : 38 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಇಂದಿರಾನಗರ, ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಗುನ್ಹೆ ಸ್ಥಳದ ಪಂಚನಾಮೆ ಆಗಿದ್ದು, ಅದನ್ನು ಈಗಾಗಲೆ ನಿಪಿ-2 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಆದರೇ ನಾನು ನಿಪಿ-2 ಕ್ಕೆ ಸಹಿ ಚಾ ಸಾ 1 ರವರ ಕೋರಿಕೆಯ ಮೇರೆಗೆ ಖೋಡ್ಲಾ ಗ್ರಾಮ ಹತ್ತಿರ ಇರುವ ಗ್ರಾಮದಲ್ಲಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಹಾಗೂ ಪಂಚನಾಮೆಯ ಸಮಯದಲ್ಲಿ ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ವಶಕ್ಕೆ ಪಡೆದುಕೊಂಡಿಲ್ಲ. ನನಗೆ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>**ವಾಟೀಸವಾಲುಃ**</u> ಮಾನ್ಯ ಸ.ಸ.ಅ ರವರಿಂದ:

ದಿಃ 25-08-2014 ರಂದು ಸಂಜೆ 04-00 ರಿಂದ 05-00 ಗಂಟೆಯ ವರೆಗೆ ನನ್ನ ಹಾಗೂ ಚಾ ಸಾ 3 ರವರ ಸಮಕ್ಷಮ ಪೊಲೀಸರು ಗುನ್ಹೆ ಸ್ಥಳದ ಪಂಚನಾಮೆಯನ್ನು ಮಾಡಿ ಒಂದು ಹಿಡಿ ಗಾತ್ರದಷ್ಟು ಒಂದು ಅಡಿ ಎತ್ತರದ ಒಣಗಿದ ತೋಗರಿಯ ಬೆಳೆಯನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಿಲ್ಲ. ಸಾಕ್ಷಿಯು ಸದರಿ ಬೆಳೆಯನ್ನು ನೋಡಿ ಗುರುತಿಸಲು ನಿರಾಕರಿಸಿರುತ್ತಾರೆ ಅದನ್ನು ಈಗಾಗಲೆ ಮು ಮಾ 1 ಎಂದು ಗುರುತಿಸಲಾಗಿದೆ.

**ಪಾಟೀಸವಾಲು:** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**